ಕಾಣುತ್ತಾರೆ. ದಸಂಸದ ಐವತ್ತರ ಹೊತ್ತಿನಲ್ಲಿ ಹಿಂದಿರುಗಿ ನೋಡಿದರೆ ಈ ಪ್ರಶ್ನೆಯನ್ನು ಹಾಕಿಕೊಳ್ಳದೆ ದಸಂಸ ಅನೇಕ ವಿಘಟನೆಗಳಾದುದು ನಮ್ಮ ಮುಂದಿದೆ. ದಲಿತರೊಳಗೆ ನಡೆಯುವ ತರತಮ ಕಲಹಗಳು ಕೂಡಿಕೊಳ್ಳಲಾಗದಷ್ಟು ದೂರ ಒಯ್ದಿವೆ. ಈ ವ್ಯಸನದ ಅಪಾಯಗಳನ್ನು ಈ ಕಥೆ ಮುಂಗಾಣ್ಕೆಯಾಗಿ ಮಂಡಿಸಿತ್ತು. ಆದರೆ ಅದನ್ನು ಅರ್ಥಮಾಡಿಕೊಳ್ಳಬೇಕಾದ ದಸಂಸದ ಮೊದಲ ಸಾಲಿನ ನಾಯಕರು ಅದರದೇ ರೂಪವಾಗಿ ಒಡೆದುಕೊಂಡಿದ್ದು ದುರಂತ.

'ಕಳ್ಳುಬಳ್ಳಿ' ಕೇವಲ ದಲಿತ ನೆಲೆಗೆ ಸೀಮಿತಗೊಳ್ಳುವುದಿಲ್ಲ. ಜಾತಿಯ ವ್ಯಸನದೊಳಗೆ ಮುಳುಗಿರುವ, ಪ್ರತಿಜಾತಿಯೊಳಗೂ ಇರುವ ಪುರೋಹಿತದ ನೆಲೆಗಳನ್ನು ಸೂಕ್ಷ್ಮವಾಗಿ ನಮ್ಮ ಮುಂದಿಡುತ್ತದೆ. 'ಕನಸು' ಕಥೆಯಲ್ಲಿನ ಅಣ್ಣಯ್ಯ ತನ್ನ ಕೇರಿಯವರನ್ನು ಉದ್ಧಾರ ಮಾಡುವವನಂತೆ ಸೋಗು ಧರಿಸಿ ಆಳದಲ್ಲಿ ಪ್ರತಿಗಾಮಿಯಾಗಿ, ಆ ಹಟ್ಟಿಯವರನ್ನು 'ಅಲ್ಲೆ ಕುಂತವರೇ' ಆಗಿಸುವಲ್ಲಿ ಯಶಸ್ವಿಯಾಗುತ್ತಾನೆ. ದೇವರಾಜ ಧರಣೆಪ್ಪನ ಹೋರಾಟದ ಫಲವನ್ನು ಅನುಭವಿಸುತ್ತಾನೆ. ಕೊನೆಗೆ ಸಮುದಾಯದ ಕನಸುಗಣ್ಣುಗಳಾಗಬೇಕಿದ್ದ ಚಂದ್ರ ಮತ್ತು ಧರಣೆಪ್ಪರು ಭವಿಷ್ಯದ ಬದುಕನ್ನು ಕಳೆದುಕೊಳ್ಳುತ್ತಾರೆ. ಕದರಟ್ಟಿ ಭವಿಷ್ಯದ ಸುಂದರ ಕನಸುಗಳನ್ನು ಹೆಣೆಯುತ್ತಲೇ ಇದೆ. ಈಗಲೂ...

ಇಡೀ ಸಂಕಲನ 'ಕಳ್ಳುಬಳ್ಳಿ'ಯನ್ನು ಬೆಸೆಯುವ ಗುಣದಿಂದ ಆಪ್ತವಾಗುತ್ತದೆ. ಈ ಸಂಬಂಧಗಳು ಕಳ್ಳುಬಳ್ಳಿರೂಪದಲ್ಲಿ ಕೂಡಿಕೊಳ್ಳುತ್ತಲೇ ಸಾಗುತ್ತವೆ. ಕಳ್ಳುಬಳ್ಳಿ ಕೇವಲ ರಕ್ತಸಂಬಂಧಗಳಿಗಷ್ಟೇ ನಿಲ್ಲದೆ ಅದರಾಚೆಗೂ ಕೂಡಿಕೊಳ್ಳಲು ಹಂಬಲಿಸುತ್ತದೆ. ಇದು 'ಕಳಚ್ಕಂಡು ಹೋಗೋದನ್ನ ಕಳಿಸಿ, ಹೊಸ್ಕಂಡು ಬರೋದನ್ನ ಬೆಸಿಯೋ ಹೊಸ ಗೂಡಾಗನ' ಆಶಯದ್ದು. ಶಾರದ, ಸರಸೂ, ಗೋರಜ್ಜಿ, ಮುತ್ತ, ಸಾಕವ್ವ... ಹೀಗೆ ಸಂಬಂಧಗಳನ್ನು ಕೂಡಿಸುತ್ತದೆ. ಈ ಸಂಬಂಧಗಳು ಕೇವಲ ಮನುಷ್ಯಲೋಕಕ್ಕೆ ಸೀಮಿತಗೊಳ್ಳದೆ ಪ್ರಾಣಿ, ಪಕ್ಷಿಲೋಕಕ್ಕೂ ವಿಸ್ತರಿಸಿಕೊಳ್ಳುತ್ತದೆ. ಹಸು, ಹಂದಿ, ಹಂದಿಮರಿಗಳು ಕಳ್ಳುಬಳ್ಳಿಯಾಗಿ ಕೂಡಿಕೊಳ್ಳುತ್ತವೆ. 'ಬಂಜೆ ಗೋರಜ್ಜಿಯ ಗುಡಾರದಲ್ಲಿ ಗಬ್ಬಾದ ಹಂದಿ ಐದು ಮರಿಗಳನ್ನು ಹಾಕಿದ್ದು' ಬಹುದೊಡ್ಡ ಕಳ್ಳುಬಳ್ಳಿ ಆಶಯವನ್ನು ಧರಿಸಿದೆ. ಅಂದರೆ ಜಾಹ್ನವಿಯವರ ಕಥೆಗಳು ಕೇವಲ ಮಹಿಳಾವಾದಕ್ಕಷ್ಟೇ ಸೀಮಿತಗೊಳ್ಳದೆ ಅಂತಿಮವಾಗಿ ಮಾನವೀಯಲೋಕದ ಕಟ್ಟುವಿಕೆಗೆ ಹಂಬಲಿಸುತ್ತವೆ.

ಕಥೆಗಳ ಮೂಲದ್ರವ್ಯವೇ ಬದುಕಿನ ಸಂಕಟಗಳು. ಈ ಸಂಕಟಗಳಿಗೆ ಪರಿಹಾರ ಹುಡುಕುವಂತೆ ಕಥೆಗಳು ತನಗೆ ತಾನೇ ಬೆಳೆಯುತ್ತವೆ. ಅದಕ್ಕೆ ಪೂರಕವಾಗಿ ನಿರೂಪಣೆ ಹೆಣೆದುಕೊಂಡಿದೆ. ಭಾಷೆಯು ತಕ್ಕನಾಗಿ ಲಗತ್ತಾಗಿದೆ. ಕಥೆಗಳು ವಸ್ತುವಿನ ಮಧ್ಯದಿಂದ ಆರಂಭವಾಗುತ್ತವೆ. ಆರಂಭ ಮತ್ತು ಕೊನೆಯ ಎರಡು ಬಿಂದುವನ್ನು ಸೇರಿಸಿ ಸಮಾನಾಂತರ ರೇಖೆ ಎಳೆಯದೆ, ಝೀಬ್ರಾ ಗೆರೆಗಳನ್ನು ಸೇರಿಸುತ್ತಾ, ಸಂಬಂಧಗಳನ್ನು ಕೂಡಿಸುತ್ತಾ ಸಾಗುತ್ತವೆ. ಸಂಬಂಧಗಳು ಸರಳರೇಖೆಯಲ್ಲ, ಆದರೆ ಕೂಡುವಂತಹವು ಎಂಬುದನ್ನು ಕಥೆಗಾರ್ತಿ ತಮ್ಮ ಸಂಕಲನದುದ್ದಕ್ಕೂ ಖಚಿತಪಡಿಸುತ್ತಾರೆ.

ಭಿನ್ನರೂಪಿಯಾದ ಕತೆಗಳು ಈ ಸಂಕಲನದಲ್ಲಿವೆ. ಮುಗ್ಧಲೋಕವೊಂದು ಕಳೆದುಹೋಗುವ 'ದೂಪ್ದಳ್ಳಿ ಸೆಕ್ಸಿ ದುರುಗ', 'ಬಿಚ್ಚಿ ನೋಡಿದರೆ', 'ಮನಸಿನಂತೆ ಮಹಾದೇವ', 'ಚುಕ್ಕಿಗೆರೆ' ಕಥೆಗಳು ಇನ್ನೊಂದು ಲೋಕದ ವಿಸ್ತರಣೆಗಳಾಗಿವೆ. ಮುಗ್ಧಲೋಕವೊಂದು ಆಧುನಿಕ ಬದುಕಿನ ಕ್ರಮವರಿಯದೆ ಕಾಣೆಯಾಗುವ ರೂಪವಾಗಿ 'ದೂಪ್ದಳ್ಳಿ ಸೆಕ್ಸಿ ದುರುಗ' ಇದೆ. ಆಜೀವಿಕರ ಕುರಿತಾದ ಜಗತ್ತನ್ನೇ 'ಚುಕ್ಕಿಗೆರೆ' ನಮ್ಮ ಮುಂದಿಡುತ್ತದೆ. ಕರ್ಮದ ಶೃಂಖಲೆಯಿಂದ ಮುಕ್ತಳಾಗಿ ಭಿಕ್ಷಾಟನೆಯನ್ನು ಮಾಡುತ್ತಲೇ ವಿಘಟನೆಗೊಂಡ ಲೋಕದ ಚುಕ್ಕಿಗಳನ್ನು ಕೂಡಿಸಿ ರಂಗೋಲಿ ಎಳೆಯುವ 'ಶಾರದೆ' ಅಜೀವಿಕದ ಪ್ರತಿನಿಧಿಯಾಗಿ ಗಟ್ಟಿಪಾತ್ರವಾಗಿ ಕಟ್ಟಿಕೊಂಡಿದೆ.

ಇಡೀ ಸಂಕಲನ ನಮ್ಮೆದುರಿಗೆ ಇಟ್ಟಿರುವ ಪ್ರಶ್ನೆಗಳಿಗೆ ನಮ್ಮ ಸಮಕಾಲೀನ ಸಮಾಜವೂ ಉತ್ತರಗಳನ್ನು ಹುಡುಕಿಕೊಳ್ಳಬೇಕಿದೆ. ಆ ಮೂಲಕ ನಾವು ಸಾಗಬೇಕಾದ ಬಹುಮುಖ್ಯ ದಾರಿಗಳನ್ನು ಈ ಸಂಕಲನ ಶೋಧಿಸಿಕೊಳ್ಳುತ್ತಿದೆ. ಅದನ್ನು ಆಯ್ದುಕೊಳ್ಳಬೇಕಷ್ಟೇ. ಸಂಸ್ಕೃತಿ, ಸಮಾಜ, ಮಾನವೀಯ ಜಗತ್ತೊಂದನ್ನು ಕಡೆಯುವ ಕಡೆ ಇಡೀ ಸಂಕಲನ ತೋರುಗೈಯಾಗಿ ನಮ್ಮ ಮುಂದೆ ನಿಂತಿದೆ. ●